# ಬದ್ಧ-ಬುದ್ಧ



ಶಿಲೆಯಾದರೇನು?
ಬುದ್ಧನಲ್ಲವೇ ಅವನು?
ಅರಿವನರಸಿ ಅರಮನೆಯ ತೊರೆದವನು,
ನಡುರಾತ್ರಿಯಲಿ ಎದ್ದು ನಡೆದವನು.

ಶಿಲೆಯಾದರೇನು?
ಬುದ್ಧನಲ್ಲವೇ ಅವನು?
ಅರಳಿಯ ಮರದಡಿಯಲಿ
ಮರೆವ ಹರಿದವನು
ನಿಜ ಜ್ಞಾನವನು ಪಡೆದು
ಆನಂದಿಸಿದವನು.

ಶಿಲೆಯಾದರೇನು?
ಬುದ್ಧನಲ್ಲವೇ ಅವನು?
ಆಸೆಯನು ಅಳಿದವನು
ದುಃಖವನು ಗೆದ್ದವನು
ಇಹದೊಳಿದ್ದೂ ಶಿಲೆಯಂತೆ
ನಿರ್ಭಾವುಕನಾದವನು.

ಶಿಲೆಯಾದರೇನು?
ಬುದ್ಧನಲ್ಲವೇ ಅವನು?
ಮುಂಡವುರುಳಿದರೂ ತಾ,
ಧ್ಯಾನಸ್ಥನಾದವನು.
ಜಗದ ಹಿಂಸೆಗೆ ನಸುನಗೆಯ
ಉತ್ತರವನಿತ್ತವನು.

ಶಿಲೆಯಾದರೇನು?
ಬುದ್ಧನಲ್ಲವೇ ಅವನು?
ಧರೆಗೆ ದಯೆಯ
ಸಂದೇಶವನು ಸಾರಿದವನು.
ಶಿಲ್ಪವಾಗಿ ರುಂಡವುರುಳಿದರೂ
ಶಾಂತಿಯನು ಸಾರುತ್ತಾ...
ಬದ್ಧತೆಯ ಮೆರೆದವನು.

● **ಸುಮಂಗಲಾ ಎಸ್.**
**ಮುಮ್ಮಿಗಟ್ಟಿ**

# ಏಕಾಗ್ರತೆಯ ಅಮಲು

ಏಕಾಗ್ರ ಚಿತ್ತದಲಿ ಧೇನಿಸುತ್ತಿದ್ದರೆ
ಆಗುಹೋಗುಗಳ ಅರಿವಿರುವುದಿಲ್ಲ,
ಜೀವಂತವಾಗಿರುವುದಕ್ಕೂ
ಅಲ್ಲದಕ್ಕೂ.

ಅರಿವಿರಲಿಲ್ಲ ಬಾಹುಬಲಿ
ತಪಸ್ಸಿಗೆ ನಿಂತಾಗ
ಮಾಧವೀ ಲತೆಗಳು
ಕಾಲುಗಳ ಬಳಸಿದ್ದು,
ಹುತ್ತಗಳು ಆವರಿಸಿದ್ದು.

ಅರ್ಜುನನಿಗೆ ಕಂಡದ್ದು
ಕಣ್ಣು ಮಾತ್ರ ಹಕ್ಕಿಯದು
ಗುರುವಿನಾದೇಶವ ಪಾಲಿಸುವಾಗ.

ಹೊರತಾಗಲಿಲ್ಲ ಧೀದ್ರವಾದಾಗ
ಧ್ಯಾನಸ್ಥಿತ ಬುದ್ಧನ ವಿಗ್ರಹದ ಸ್ಥಿತಿ
ಧೇನಿಸುವುದೆಂದರೆ ಇಷ್ಟೇ–
ಏಕಾಗ್ರತೆಯ ಅಮಲಿನಲ್ಲಿ
ಕಣ ಕಣಗಳು ಲೀನವಾಗುವುದು...

● **ನಾಗರತ್ನ ಟಿ.ಎ.**